ಹಣವನ್ನು ಈಗಾಗಲೇ ವಸೂಲಿ ಮಾಡಿದ್ದೇವೆ. ತಾವು ಇದರ ಬಗ್ಗೆ ಹೇಳಿವುದಕ್ಕಿಂತ ಮೊದಲೇ ಆ ಹಣವನ್ನು ವಸೂಲಿ ಮಾಡಿದ್ದೇವೆ. ಆದ್ದರಿಂದ ಇದರಲ್ಲಿ ಯಾವುದೇ ಸಿ.ಬಿ.ಐ. enquiry, ಸದನದ ಸಮಿತಿಯ ಅವಶ್ಯಕತೆ ಇಲ್ಲ. ಸರ್ಕಾರ ಇವತ್ತು ಸಮರ್ಥವಾಗಿದೆ. ಯಾರು ಅಧಿಕಾರಿಗಳು ತಪ್ಪಿತಸ್ಥರಿದ್ದಾರೆ. ಅಧಿಕಾರಿಗಳನ್ನು ಅಮಾನತ್ತು ಮಾಡತಕ್ಕದ್ದು, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲು ನಾವು ಈಗಾಗಲೇ ತಿರ್ಮಾನ ಮಾಡಿದ್ದೇವೆ. ಈ ಒಂದು ವಿಷಯದಲ್ಲಿ ನಾವು ಯಾವುದನ್ನು ಮುಚ್ಚಿ ಇಡುವ ಪ್ರಶ್ನೆ ಇಲ್ಲ. ಈ ಒಂದು ವಿಷಯದಲ್ಲಿ ಸರ್ಕಾರ ತೀವ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ, ಅದರ ಜೊತೆಗೆ ಮುಂದೆ ಮಾಡಿಸತಕ್ಕ ಕೆಲಸದಲ್ಲಿ ಈ ರೀತಿ ಯಾವುದೇ ರೀತಿಯ ಸ್ವೇಚ್ಚಾಚಾರದ ತೀರ್ಮಾನವನ್ನು ಅಧಿಕಾರಿಗಳು ಮಾಡದೇ ಇರುವ ರೀತಿಯಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ದವಾಗಿದೆ ಎಂಬುದನ್ನು ಸದಸ್ಯರ ಗಮನಕ್ಕೆ ತರಲು ಬಯಸುತ್ತಿದ್ದೇನೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. 643 ಕೋಟಿ ಎಂದು ನಾವೇನು ಹೇಳಿದ್ದೇವೆ, ಅದು ಹೂಳೆತ್ತುವ ಒಟ್ಟಾರೆ ಕಾರ್ಯಕ್ರಮಕ್ಕೆ ಇಟ್ಟಿದ್ದಾರೆ. 18 ಕೋಟಿ ಅವ್ಯವಹಾರ ವಾಗಿದೆಯೆಂದು ಈಗಾಗಲೇ ತಾವು ಹೇಳಿದ್ದೀರಿ. ನಮ್ಮ ಅಶೋಕ್‌ರವರು 3 ತಿಂಗಳ ಹಿಂದೆಯೇ ಅವ್ಯವಹಾರವಾಗಿದೆ. ನಾನು ಅಂದೇ ತನಿಖೆ ಮಾಡಬೇಕೆಂದು ಹೇಳಿದ್ದೇನೆಂದು ಹೇಳಿದ್ದಾರೆ. ಒಟ್ಟಿನಲ್ಲಿ ಇಲ್ಲಿ ಅವ್ಯವಹಾರ ಆಗಿದೆ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ಇದು ಕೇಂದ್ರ ಸರ್ಕಾರದ ಹಣ. ಇದು ಕೇವಲ ಬೆಂಗಳೂರು, ಮೈಸೂರು ನಗರಕ್ಕೆ ಕೊಟ್ಟಿಲ್ಲ. ಇಡೀ ರಾಷ್ಟ್ರದಲ್ಲಿ 1 ಲಕ್ಷ 34 ಕೋಟಿ ಕೊಟ್ಟಿದ್ದಾರೆ. ಇವತ್ತು 22. 535 ಕೋಟಿ ಬೆಂಗಳೂರು ನಗರಕ್ಕೆ ಏನು ಬರುತ್ತದೆ, ಪ್ರಾರಂಭದಲ್ಲೇ ಈ ರೀತಿಯ ಅವ್ಯವಹಾರ ಅದರೆ ಹೇಗೆ? 4 ಕೋಟಿ ಅವ್ಯವಹಾರದ ಬಗ್ಗೆ ನಮಗೆ ಗೊತ್ತಾದ ಮೇಲೆ ಅದನ್ನು ವಸೂಲಿ ಮಾಡಿದ್ದೇವೆ, ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೇವೆಂದು ತಾವು ಹೇಳಿದ್ದೀರಿ. ಎಲ್ಲಾ ಸದನದ ಸದಸ್ಯರು ಇವತ್ತಿನ ದಿವಸ ಇದರ ಬಗ್ಗೆ ಸದನದ ಸಮಿತಿ ಆಗಬೇಕೆಂದು ಹೇಳುತ್ತಿದ್ದಾರೆ. ಹೂಳೆತ್ತುವ ಕೆಲಸ ಎಷ್ಟರ ಮಟ್ಟಿಗೆ ಆಗಿದೆ ನೋಡಬೇಕು. ಅದಕ್ಕೆ ಒಂದು ಸದನದ ಸಮಿತಿ ಮಾಡಿ. ಕೇಂದ್ರ ಸರ್ಕಾರದ ಹಣ ಆಗಿರುವ ಕಾರಣ ಸಿ.ಬಿ.ಐ. ತನಿಖೆ ಆಗಲಿ ಎಂದು ಬೇಡಿಕೆ ಇದೆ. ಇದರ ಬಗ್ಗೆ ತಾವು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ನಾವು ಧರಣಿ ಮಾಡಲು ತೀರ್ಮಾನ ಮಾಡಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರುಗಳು ಬಾವಿಯಲ್ಲಿ ಧರಣಿ ಮಾಡಲು ಬಂದರು)

ಸಭಾಧ್ಯಕ್ಷರ ತೀರ್ಮ:

ಅ) ವಿಷಯ: ಮಾನ್ಯ ಸದಸ್ಯರಾದ ಶ್ರೀ. ದಿನೇಶ್ ಗುಂಡೂರಾವ್‌ರವರು "ಈಸಂಜೆ" ದಿನಪತ್ರಿಕೆಯ ವಿರುದ್ಧ ನೀಡಿರುವ ಹಕ್ಕುಚ್ಯುತಿ ಸೂಚನೆ ಬಗ್ಗೆ ತೀರ್ಮ:

ಉಪಾಧ್ಯಕ್ಷರು: ಮಾನ್ಯ ಸದಸ್ಯರಾದ ಶ್ರೀ. ದಿನೇಶ್ ಗುಂಡೂರಾವ್ ಅವರು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಾಮಾವಳಿಗಳ ನಿಯಮ 192ರ ಮೆರೆಗೆ ಸೂಚನೆಯನ್ನು ನೀಡಿ ದಿನಾಂಕ:04.07.2007ರ ಈ ಸಂಜೆ ದಿನಪತ್ರಿಕೆಯನ್ನು ಲಗತ್ತಿಸಿ ಅವರ ಹಾಗೂ ಅವರ ಕುಟುಂಬದ ಬಗ್ಗೆ ಇಲ್ಲಸಲ್ಲದ ಸತ್ಯಕ್ಕೆ ದೂರವಾದ ಸುದ್ದಿಗಳನ್ನು ಪ್ರಕಟಿಸಲಾಗಿದೆ ಹಾಗೂ ಈ ಸುದ್ದಿಯಿಂದ ಅವರ ಹಕ್ಕಿಗೆ ಚ್ಯುತಿಯಾಗಿದೆಯೆಂದು ತಿಳಿಸಿ, ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಲು ಅನುಮತಿಯನ್ನು ಕೋರಿರುತ್ತಾರೆ.

ಈ ಬಗ್ಗೆ ಪ್ರಾಸ್ತಾವಿಕವಾಗಿ ಪ್ರಸ್ತಾಪಿಸಲು ಅನುಮತಿಯನ್ನು ನೀಡಿದಾಗ ಮಾನ್ಯ ಸದಸ್ಯರುಗಳಾದ ಶ್ರೀ ದಿನೇಶ್ ಗುಂಡೂರಾವ್, ಶ್ರೀ ಕೆ.ಆರ್. ರಮೇಶ್ ಕುಮಾರ್, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಕೃಷ್ಣಬೈರೇಗೌಡ, ವಿರೋಧ ಪಕ್ಷದ ನಾಯಕರು, ಶ್ರೀ ಆರ್.ವಿ. ದೇಶಪಾಂಡೆ, ಹಾಗೂ ವಾಟಾಳ್ ನಾಗರಾಜ್ ಇವರುಗಳ ಚರ್ಚೆಯಲ್ಲಿ ಭಾಗವಹಿಸಿ ಈ ಸಂಜೆ ಪ್ರಕಟಣೆಯಿಂದ ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿಯಾಗಿದೆಯೆಂದು ಹಕ್ಕುಬಾದ್ಯತಾ ಸಮಿತಿಗೆ ಕಳುಹಿಸಲು ಒತ್ತಾಯಿಸಿರುತ್ತಾರೆ. ಸರಕಾರದ ವತಿಯಿಂದ ಮಾನ್ಯ ಕಂದಾಯ ಸಚಿವರು ಮಾತನಾಡಿ ಈ ಪ್ರಕರಣವು ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ.

ಎರಡೂ ಕಡೆಯ ವಾದವನ್ನು ಪರಿಶೀಲಿಸಿರುತ್ತೇನೆ. ಈ ಸಂಜೆ ಪ್ರಕಟಣೆಯ ಪತ್ರಿಕೆಯಲ್ಲಿ [illegible]" ಪ್ರತಿಷ್ಟಿತ 288 ಪ್ರಭಾವಿ ವ್ಯಕ್ತಿಗಳು ಸೇರಿದಂತೆ 26 ಸಾವಿರ ಮಂದಿ ಸರ್ಕಾರಿ ಭೂಮಿ ಒತ್ತುವರಿ ಮಾಡಿರುವುದು ಬಯಲಾಗಿದೆ. ಬೆಂಗಳೂರು ನಗರ ಮತ್ತು ಹೊರವಲಯದಲ್ಲಿ ಕೊಟ್ಯಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಭೂಮಿ ಒತ್ತುವರಿ ಪತ್ತೆ ಹಚ್ಚಲು